ಎಲ್ಲಾ ಅಭ್ಯರ್ಥಿಗಳಿಗೂ ಸರಿಸಮನಾದ ಕಾಯಿದೆಗಳನ್ನು ಅನುಸರಿಸಲಾಗಿದ್ದು, ಗ್ರಾಮಾಂತರ ಅಭ್ಯರ್ಥಿಗಳಿಗಾಗಿ ನೇಮಕಾತಿ ಕಾಯಿದೆಗಳನ್ನು ಬೇರೆಯಾಗಿ ಆಳವಡಿಸಿರುವುದಿಲ್ಲ.

ಕುಂದಗೊಳ ಬಸ್ ನಿಲ್ದಾಣಕ್ಕೆ ಡಾಂಬರ್

419 (108). ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೊಳ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕುಂದಗೋಳ ಬಸ್ ನಿಲ್ದಾಣದ ಆವರಣದಲ್ಲಿ ಡಾಂಬರು ಹಾಕುವುದರ ಕುರಿತು ಟೆಂಡರ್ ಕರೆಯಲಾಗಿದೆಯೇ?

ಆ) ಹಾಗಿದ್ದಲ್ಲಿ ಯಾವ ಸಮಯದಲ್ಲಿ ಕೆಲಸ ಪೂರೈಸಲಾಗುವುದು?

ಇ) ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಹಾಗೂ ಸಾರ್ವಜನಿಕರಿಗೆ ಮೂತ್ರಾಲಯದ ಸ್ವಚ್ಛತೆ ಬಗ್ಗೆ ಗಮನ ಹರಿಸಲಾಗಿದೆಯೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):-

ಅ) ಹೌದು.

ಆ) 3 ತಿಂಗಳ ಒಳಗೆ.

ಇ) ಕುಡಿಯುವ ನೀರು ಮತ್ತು ಮೂತ್ರಾಲಯದ ವ್ಯವಸ್ಥೆಯನ್ನು ಮಾಡಲಾಗಿದೆ. ಮೂತ್ರಾಲಯದ ಸ್ವಚ್ಚತೆಯ ಬಗ್ಗೆ ಇನ್ನೂ ಹೆಚ್ಚಿನ ಗಮನ ಹರಿಸಲಾಗುವುದು.

ನ್ಯಾಯವಾದಿಗಳ ಸಂಘಕ್ಕೆ ಹೆಚ್ಚಿನ ಅನುದಾನ

420 (127). ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರ್):- ಮಾನ್ಯ ಕಾನೂನು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ೧೯೯೧-೨ನೇ ಸಾಲಿನಲ್ಲಿ ರಾಜ್ಯದ ನ್ಯಾಯವಾದಿಗಳ ಸಂಘಕ್ಕೆ ಬಿಡುಗಡೆ ಮಾಡಿದ ಅನುದಾನ ಎಷ್ಟು? (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಅನುದಾನ ಕಡಿಮೆಯಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ನ್ಯಾಯವಾದಿಗಳ ಸಂಘಕ್ಕೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಸಚಿವರು):-

ಅ) 1-4-91 ರಿಂದ 18-2-92ರ ವರೆವಿಗೆ ರೂ. 1,75,500/- ಅನುದಾನವಾಗಿ ಕೊಡಲಾಗಿದೆ.

ವಿವರಗಳ ಅನುಬಂಧ ಲಗತ್ತಿಸಿದೆ.

ಆ) ಅನುದಾನ ಹೆಚ್ಚಿಸುವಂತೆ ಮನವಿಗಳು ಬಂದಿದೆ.

ಇ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.